ಭಾವ' ಎಂದಿದ್ದ. ಹೀಗೆ ಶಕ್ತ ಭಾವನೆಗಳು ಸ್ವಚ್ಛಂದವಾಗಿ ಉಕ್ಕಿದಾಗ ಮಾತ್ರ ಮೊಗಳ್ಳಿಯ ಕಥೆಗಳು, ಕಾದಂಬರಿಗಳು, ಆತ್ಮಕತೆಯ ಕೆಲವು ಭಾಗಗಳು ಅರ್ಥಪೂರ್ಣವಾದದ್ದನ್ನು ಸೃಷ್ಟಿಸಿವೆ. ಮೊಗಳ್ಳಿ ಬರೆದಿದ್ದು ಕಥೆಯಿರಲಿ, ಕವಿತೆಯಿರಲಿ, ಕಾದಂಬರಿಯಿರಲಿ, ವಿಶ್ಲೇಷಣೆಯಿರಲಿ, ಅವು ರೊಮ್ಯಾಂಟಿಕ್ ಕವಿ ಕೀಟ್ಸ್ ಅಂದುಕೊಂಡಂತೆ 'ಗಿಡಗಳಿಗೆ ಎಲೆಗಳು ಮೂಡುವಂತೆ' ಸಹಜವಾಗಿ ಮೂಡಿ ಬಂದಾಗ ಆಕರ್ಷಕವಾಗಿವೆ. ಅವನ್ನು ತಿದ್ದಿ ನೇರ್ಪು ಮಾಡುವ ಬಯಕೆ, ಕಾತರ, ಉಮೇದು, ಒಲವು ಮೊಗಳ್ಳಿಯ ಕಥಾಸ್ಥಲಕ್ಕೆ ಹೊರಗು!

ಆದರೆ, ಚಿತ್ರಗಳು ಸುಮ್ಮನೆ ಉಕ್ಕಿದಾಗ, ಕಥಾಬರವಣಿಗೆಯೇ ಹಾದಿ ತೋರುತ್ತಾ ಮುನ್ನಡೆಸಿದಾಗ ಮಾತ್ರ ಮೊಗಳ್ಳಿಯ ಕಥಾಕಣ್ಣು ಲೋಕದ ದುಃಖ, ದುರಂತ, ಉಲ್ಲಾಸ, ನಿಗೂಢ ಎಲ್ಲವನ್ನೂ ಕಾಣತೊಡಗುತ್ತದೆ. ಊರಿನ ಕ್ರೌರ್ಯ, ಕೇರಿಯ ಅಸಹಾಯಕತೆ, ಬಡತನ; ಅದರ ಜೊತೆಗೇ ದಲಿತಲೋಕದ ಒಳಗೇ ಇರುವ ಹಿಂಸೆ; ದಲಿತ ಸಮಾಜಗಳಲ್ಲಿ ಗಂಡು- ಹೆಣ್ಣುಗಳ ಮೇಲೆ, ಮಕ್ಕಳ ಮೇಲೆ ನಡೆಸುವ ಹಿಂಸೆಯ ಭೀಕರ ಚಿತ್ರಗಳು ಮೊಗಳ್ಳಿಯ ಕಥಾಲೋಕದಲ್ಲಿ ಕಿಕ್ಕಿರಿಯ ತೊಡಗುತ್ತವೆ. ಎಲ್ಲ ಜಾತಿಗಳ ಜನರಲ್ಲೂ ಇರುವ ಜಾತಿಮೂಲದ ಬಗೆಬಗೆಯ ಸಣ್ಣತನ, ಕ್ರೌರ್ಯ; ಮೇಲುಜಾತಿಗಳ ಜಾತಿಅಹಂಕಾರದ ದುರುಳತನ; ಕಾಲದ ಓಟದಲ್ಲಿ ಜಮೀನ್ದಾರಿ ಜಾತಿಗಳ ಪತನ; ಹೊಸ ತಲೆಮಾರಿನ ದಲಿತರ ಹೋರಾಟ ಹಾಗೂ ಹೊಸ ವ್ಯಕ್ತಿತ್ವ... ಇವೆಲ್ಲದರ ಸಂಕೀರ್ಣ ಚಿತ್ರಗಳೂ ಇಲ್ಲಿವೆ. ಮೇಲುಜಾತಿಗಳ ವಿರುದ್ಧದ ಕ್ರೌರ್ಯದ ವಿರುದ್ಧ ಬಂಡೆದ್ದು, ಹಿಂಸೆಯ ಪ್ರಯೋಗಕ್ಕೂ ಸಿದ್ಧವಿರುವ ದಲಿತ ಬಂಡಾಯಗಾರ ಬಸವರಾಜ; ದಲಿತ ವಿದ್ಯಾವಂತನನ್ನು ಬೇಕೆಂತಲೇ ಅವಮಾನ ಮಾಡುವ ಪಟೇಲನ ಕ್ರೌರ್ಯವನ್ನು ನುಂಗಿಕೊಂಡು, ಅತಿ ಮಾನವೀಯವಾಗುವ ಪ್ರಕೃತಿ ಕಲಾವಿದ ಪರಮೇಶ ಇಬ್ಬರೂ ಇಲ್ಲಿದ್ದಾರೆ. ನಕ್ಸಲ್‌ವಾದ, ಅಂಬೇಡ್ಕರ್‌ವಾದ, ಗಾಂಧೀವಾದ ಎಲ್ಲವೂ ಎಲ್ಲೋ ಹಿಂದೆ ಇದ್ದು ಮೊಗಳ್ಳಿ ಕಥೆಗಳ ನೋಟ, ಪಾತ್ರಗಳನ್ನು ರೂಪಿಸುವುದು ಹೀಗೆ.

ಎಲ್ಲೆಲ್ಲಿ ಮೊಗಳ್ಳಿಯ ಕಥಾಪಯಣ ಒಂದು ಬಗೆಯ ಅಪ್ರಜ್ಞಾಪೂರ್ವಕ ರೀತಿಯಲ್ಲಿ ಅಥವಾ ಕನಸಿನಲ್ಲಿ ಎಂಬಂತೆ ನಡೆಯಿತೋ, ಅಲ್ಲೆಲ್ಲ ಆ ಕೃತಿಗಳು ಕುತೂಹಲಕರ ಆಕಾರ, ವಿನ್ಯಾಸ ಪಡೆಯುತ್ತವೆ. ಆದರೆ ಕಲೆಯಾಗಲಾರದ ಪ್ರಜ್ಞಾ ಪ್ರವಾಹ ಎತ್ತೆಂದರತ್ತ ಹರಿದಾಗ ಬರವಣಿಗೆ 'ಹರಿದತ್ತ ಬೀದಿ' ಎಂಬಂತಾಗುತ್ತದೆ. ಈ ಬಗೆಯ ಮೊಗಳ್ಳಿಯ ಅರಾಜಕ ಪ್ರಜ್ಞಾಪ್ರವಾಹಕ್ಕೆ ಕವಿತೆಯೇ ತಕ್ಕ ಪ್ರಕಾರವಾಗಿತ್ತೇನೋ ಎಂಬುದನ್ನು 'ಅಲ್ಲಿ ಯಾರೂ ಇಲ್ಲ'ದಂಥ ಗಪದ್ಯ ಕಾದಂಬರಿ, ಅಥವಾ 'ದೇವ ಸ್ಮಶಾನ', 'ಸೂರ್ಯನ ಬಚ್ಚಿಡಬಹುದೆ' ಕವನ ಸಂಕಲನಗಳು ಸೂಚಿಸುವಂತಿವೆ.

4

ಕಥೆಗಾರ ಮೊಗಳ್ಳಿ 'ತೊಟ್ಟಿಲು' ಕಾದಂಬರಿ ಬರೆಯುವ ಹೊತ್ತಿಗೆ ತನ್ನ ಆವರೆಗಿನ ಕಥಾಲೋಕದ ಪರಿಚಿತ ಪರಿಸರದ ವಿವರಗಳನ್ನೂ, ಆವರೆಗಿನ ವಾಸ್ತವವಾದಿ ಬರವಣಿಗೆಯ ಕ್ರಮವನ್ನೂ ಬದಲಿಸಿಕೊಳ್ಳಬೇಕೆಂಬ ಸೃಜನಶೀಲ ಚಡಪಡಿಕೆ ಮೂಡಿದಂತಿದೆ. ಈ ಕಾಲದಲ್ಲಿ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಥರದವರ 'ಮಾಂತ್ರಿಕ ವಾಸ್ತವತಾವಾದಿ' ಬರವಣಿಗೆಯ ಬಗ್ಗೆ ಮೊಗಳ್ಳಿಗೆ ತಕ್ಷಣದ ವ್ಯಾಮೋಹ ಮೂಡಿದಂತಿದೆ; ಅದು 'ತೊಟ್ಟಿಲು' ಕಾದಂಬರಿಯನ್ನು ಎಲ್ಲೆಲ್ಲಿಗೋ ಎಳೆದೊಯ್ದಂತಿದೆ. ರೇಡಿಯೋದಲ್ಲಿ ಲೀನವಾದ ರೇಡಿಯೋ ಚಿಕ್ಕಪ್ಪ, ಸದಾ 'ಹಾ ಓ ಅಯ್ಯೋ' ಅನ್ನುವ ಹಾ ಓ ಅಯ್ಯೋ ಎಂಬ ಅಲೆಮಾರಿ; ತೊಟ್ಟಿಲಿಗೆ ಅಂಟಿ ಕೊಂಡ ಮುದುಕಿ... ಇಂಥ ಅಪರೂಪದ ಪಾತ್ರಗಳು ಇಲ್ಲಿ ಸೃಷ್ಟಿಯಾಗಿವೆ. ಸ್ವಾತಂತ್ರ್ಯ ಚಳುವಳಿಯ ಕಾಲದಿಂದ ತುರ್ತು ಪರಿಸ್ಥಿತಿಯ ನಂತರದವರೆಗೂ ಇಲ್ಲಿ ಹಬ್ಬಿರುವ ಘಟನಾವಳಿಗಳು, ಸನ್ನಿವೇಶಗಳು ಅಪರೂಪದ ಚಿತ್ರಗಳಾಗಿವೆ. ಭಾಷೆಯ ಉಕ್ಕಿನಲ್ಲಿ ಮೂಡುವ ವರ್ಣನೆಗಳು, ಹಠಾತ್ತನೆ ಸೃಷ್ಟಿಯಾಗುವ ಪಾತ್ರಗಳು ಮೊಗಳ್ಳಿ ಪಡೆದ ಹೊಸ ಶಕ್ತಿಯನ್ನೂ ಹೇಳುತ್ತವೆ.

ನಾನೊಮ್ಮೆ ಆಫ್ರಿಕಾದ ಆರಂಭದ ಕಾದಂಬರಿಕಾರ ಅಮೊಸ್ ಟುಟುವೋಲನ 'ದ ಪಾಮ್ ವೈನ್ ಡ್ರಿಂಕಾರ್ಡ್' ಎಂಬ ಆಫ್ರಿಕನ್-ಇಂಗ್ಲಿಷ್